6. ವರ್ಗ ಬದಲಾವಣೆ ಕೋರಿರುವ ಅಹವಾಲುಗಳು

7. ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು

ಉ) ಹೌದು.

ಊ) ಲೋಪದೋಷಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕರಿಸಿರುವ ಅಹವಾಲುಗಳನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಿ ಖಾಯಂ ಪಡಿತರ ಚೀಟಿ ವಿತರಣೆಗೆ ಕ್ರಮ ವಹಿಸಲಾಗುವುದು. ಇದಕ್ಕೆ 6 ತಿಂಗಳ ಕಾಲಾವಕಾಶದಲ್ಲಿ ಕ್ರಮ ವಹಿಸಲಾಗುವುದು. ಶಾಶ್ವತ ಪಡಿತರ ಚೀಟಿಗಳನ್ನು ನೀಡಲು ರೂ. 45–00 ಶುಲ್ಕವನ್ನು ನಿಗಧಿ ಪಡಿಸಲಾಗಿದೆ.

147 (232) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಮೈಸೂರಿನ ಹಾಪ್‌ಕಾಮ್ಸ್‌ನ್ನು ಬೆಂಗಳೂರಿನ ಹಾಪ್‌ಕಾಮ್ಸ್‌ಗೆ ವಿಲೀನ ಗೊಳಿಸಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಮೈಸೂರಿನ ಭಾಗದ ರೈತರಿಗೆ ಅನುಕೂಲವಾಗುವುದೆಂಬುದು ಸರ್ಕಾರಕ್ಕೆ ತಿಳಿದಿದೆಯೇ ;

ಇ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗೆ ತೆಗೆದುಕೊಂಡ ಕ್ರಮವೇನು ; (ವಿವರ ನೀಡುವುದು)?

**ಶ್ರೀ ಜಿ.ಟಿ. ದೇವೇಗೌಡ** (ಸಹಕಾರ ಸಚಿವರು):

ಅ) ಹೌದು

ಆ) ಇಲ್ಲ.

ಇ) ಮೈಸೂರು ಹಾಪ್‌ಕಾಮ್ಸ್‌ನ್ನು ಬೆಂಗಳೂರು ಹಾಪ್‌ಕಾಮ್ಸ್‌ಗೆ ವಿಲೀನಗೊಳಿಸಲು ನೌಕರರು ಮತ್ತು ರೈತರಿಂದ ಮನವಿ ಬಂದಿತ್ತು ಈ ಬಗ್ಗೆ ಸರ್ಕಾರ ಪರಿಶೀಲಿಸಿ, ಪ್ರತಿಯೊಂದು ಜಿಲ್ಲಾ ಹಾಪ್‌ಕಾಮ್‌ಗಳು ಸ್ವಂತ ಸಂಪನ್ಮೂಲ ರೂಢಿಸಿಕೊಂಡು ಆ ವ್ಯಾಪ್ತಿಯ ರೈತರು ಮತ್ತು ಗ್ರಾಹಕರುಗಳಿಗೆ ಸಹಾಯವಾಗಬೇಕೆಂಬ ಉದ್ದೇಶದಿಂದ ವಿಲೀನಗೊಳಿಸುವ ಮನವಿಯನ್ನು ಪರಿಗಣಿಸಿರುವುದಿಲ್ಲ.

148 (233) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಮೈಸೂರಿನ ಆರ್.ಎಂ.ಸಿ.ಯಲ್ಲಿನ ಮಳಿಗೆಗಳು, ದಾಸ್ತಾನು ಮಳಿಗೆಗಳು ಹಾಗೂ ಇತರೆ ಕಟ್ಟಡಗಳೆಷ್ಟು (ವಿವರ ನೀಡುವುದು) ;

ಆ) ಈ ಕಟ್ಟಡಗಳ ನಿರ್ವಹಣೆಗಾಗಿ ಕಳೆದ 3 ವರ್ಷಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು ; (ವಿವರ ನೀಡುವುದು) ;

ಇ) ಮೈಸೂರಿನಲ್ಲಿರುವ ಆರ್.ಎಂ.ಸಿ. ಯಿಂದ ಯಾವ ಯಾವ ಮೂಲಗಳಿಂದ ಬರುವ ಆದಾಯವೆಷ್ಟು ; (ಮಾಸಿಕವಾರು ಪ್ರಸಕ್ತ ಸಾಲಿನ ವಿವರ ನೀಡುವುದು) ;

ಈ) ಮೂಲಭೂತ ಸೌಕರ್ಯಗಳಾದ ಶೌಚಾಲಯ, ನೀರು, ವಿದ್ಯುಚ್ಛಕ್ತಿ, ರಸ್ತೆ, ಪ್ರಾಂಗಣಗಳು ಈ ಮಾರುಕಟ್ಟೆಯಲ್ಲಿವೆಯೇ ;

ಉ) ಈ ಮಾರುಕಟ್ಟೆಯ ಸಮಗ್ರ ಅಭಿವೃದ್ಧಿಗಾಗಿ ಹಾಗೂ ಅಧುನೀಕರಣಕ್ಕಾಗಿ ಸರ್ಕಾರ ಯಾವ ಕ್ರಮ ವಹಿಸಿದೆ (ವಿವರ ನೀಡುವುದು)?

**ಶ್ರೀ ಶರಣಬಸಪ್ಪ ದರ್ಶನಾಪುರ** (ಕೃಷಿ ಮಾರುಕಟ್ಟೆ ಸಚಿವರು):

ಅ) ಬಂಡೀಪಾಳ್ಯ ಮುಖ್ಯ ಮಾರುಕಟ್ಟೆ ಪ್ರಾಂಗಣ

| | |
|---|---|
| ಅಂಗಡಿ ಮಳಿಗೆಗಳು | 8 |
| ಅಂಗಡಿಗೋದಾಮುಗಳು | 52 |
| ಈರುಳ್ಳಿ ಆಲೂಗೆಡ್ಡೆ ಅಂಗಡಿಮಳಿಗೆ | 20 |
| ಎನ್.ಜಿ.ಆರ್.ಜಿ. ಗೋದಾಮು | 2 |
| ಕಚೇರಿ ಕಟ್ಟಡ | 1 |
| ಟೀಸ್ಟಾಲ್ | 3 |
| ರೈತಭವನ | 1 |
| ಪೊಲೀಸ್ ಠಾಣೆ ಕಟ್ಟಡ | 1 |
| ಶ್ರಮಿಕ ಭವನ | 1 |
| ಶೌಚಾಲಯ | 6 |
| ತನಿಖಾಠಾಣೆ | 2 |
| ನೌಕರರ ವಸತಿಗೃಹ | 14 |
| ಹಮಾಲರ ವಸತಿಗೃಹ | 120 |
| ತರಕಾರಿ ಮಾರುಕಟ್ಟೆ ಉಪ ಪ್ರಾಂಗಣ : | |
| ಕಛೇರಿ ಕಟ್ಟಡ | 1 |
| ಉಪಹಾರಗೃಹ | 1 |
| ಬ್ಯಾಂಕ್ ಹಾಗೂ ಇಂಜಿನಿಯರಿಂಗ್ ಶಾಖೆ ಕಟ್ಟಡ | 1 |
| ಗೋದಾಮುಗಳು | 44 |
| ಅಂಗಡಿಮಳಿಗೆ ಮತ್ತು ಕೊಠಡಿ | 60 |

ಆ) 2003–04 ರೂ. 45,147–00
2004–05 ರೂ. 33,468–00
2005–06 ರೂ. 64,467–00

ಇ) ವಿವರ ಅನುಬಂಧದಲ್ಲಿ ನೀಡಿದೆ.

ಈ) ಇವೆ.

ಉ) ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣಕ್ಕಾಗಿ 159 ಎಕರೆ 38.5 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಂದಾಜು ರೂ. 13.50 ಕೋಟಿ ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಅಭಿವೃದ್ಧಿಪಡಿಸಲಾಗಿದೆ.

ಅಧಿಸೂಚಿತ ಕೃಷಿ ಉತ್ಪನ್ನಗಳ ಟೆಂಡರ್ ಪದ್ಧತಿಯನ್ನು ಗಣಕೀಕರಣಗೊಳಿಸುವ (e-Tendering) ಕುರಿತು ಎನ್.ಐ.ಸಿ. ಸಂಸ್ಥೆಯ ತಾಂತ್ರಿಕ ನಿರ್ದೇಶನದಲ್ಲಿ ಯೋಜನೆ ರೂಪಿಸಿ ಜಾರಿಗೊಳಿಸಲು ಕ್ರಮ ಜರುಗಿಸಿದೆ.

2006–07ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆ ಯಡಿಯಲ್ಲಿ ರೂ. 175.00 ಲಕ್ಷಗಳ ವಿವಿಧ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಕಾಮಗಾರಿಗಳನ್ನು ಕೈಗೊಳ್ಳಲು ನಿಯಮಾನುಸಾರ ಕ್ರಮ ಜರುಗಿಸಲಾಗುತ್ತಿದೆ.

ಅನುಬಂಧ

ಮೈಸೂರು ಸಮಿತಿಗೆ ವಿವಿಧ ಮೂಲಗಳಿಂದ ಬಂದಿರುವ ಆದಾಯದ ವಿವರ

| ಮಾಹೆ | ಮಾರುಕಟ್ಟೆ ಶುಲ್ಕ | ಲೈಸನ್ಸ್ ಶುಲ್ಕ | ದಂಡ |
|---|---|---|---|
| ಏಪ್ರಿಲ್–06 | 18,87,197–00 | 3,520–00 | 45,812–00 |
| ಮೇ–06 | 22,40,654–00 | 5,700–00 | 31,865–00 |
| ಜೂನ್–06 | 22,81,353–00 | 1,550–00 | 2,57,071–00 |
| ಜುಲೈ–06 | 22,93,205–00 | 2,950–00 | 1,14,946–00 |
| ಆಗಸ್ಟ್ –06 | 34,02,217–00 | 9,050–00 | 81,106–00 |
| ಸೆಪ್ಟೆಂಬರ್–06 | 18,20,730–00 | 2,600–00 | 1,05,924–00 |
| ಅಕ್ಟೋಬರ್–06 | 22,26,214–00 | 2,450–00 | 51,593–00 |
| ನವೆಂಬರ್–06 | 18,93,689–00 | 7,800–00 | 67,704–00 |
| ಡಿಸೆಂಬರ್–06 | 17,79,260–00 | 5,950–00 | 71,782–00 |
| ಒಟ್ಟು | 1,97,94,601–00 | 4,1300–00 | 8,27,803–00 |

| ಮಾಹೆ | ಲೀವ್ ಅಂಡ್ ಲೈಸನ್ಸ್ ಶುಲ್ಕ | ತೇವಣಿ ಮೇಲಿನ ಬಡ್ಡಿ |
|---|---|---|
| ಏಪ್ರಿಲ್–06 | 1,33,116–00 | 1,43,602–00 |
| ಮೇ–06 | 2,06,854–00 | – |
| ಜೂಟ್ಟ–06 | 1,03,138–00 | – |
| ಜುಲೈ–06 | 2,46,073–00 | 93,465–00 |
| ಆಗಸ್ಟ್ –06 | 3,37,770–00 | – |
| ಸೆಪ್ಟೆಂಬರ್–06 | 2,96,787–00 | – |
| ಅಕ್ಟೋಬರ್–06 | 2,84,857–00 | 1,07,517–00 |
| ನವೆಂಬರ್–06 | 1,79,070–00 | 23,304–00 |
| ಡಿಸೆಂಬರ್–06 | 1,90,913–00 | – |
| ಒಟ್ಟು | 19,78,598–00 | 3,67,888–00 |

149 (234) ಶ್ರೀ ಸಿದ್ದುಸಾವದಿ (ಜಮಖಂಡಿ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರಾಜ್ಯಾದ್ಯಂತ ವಿತರಿಸಲಾಗಿರುವ ಅಕ್ಷಯ, ಅಂತ್ಯೋದಯ, ಅನ್ನಪೂರ್ಣ ಮತ್ತು ಎ.ಪಿ.ಎಲ್. ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು ; (ಪ್ರತ್ಯೇಕ ವಿವರ ನೀಡುವುದು) ;

ಆ) ಜಮಖಂಡಿ ತಾಲ್ಲೂಕಿನಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೆಷ್ಟು; (ಪ್ರತ್ಯೇಕ ವಿವರ ನೀಡುವುದು) ;

ಇ) ಈ ತಾಲ್ಲೂಕಿನಲ್ಲಿ ವಿತರಿಸಲಾದ ಕಾರ್ಡುಗಳೆಷ್ಟು ; ಬಾಕಿ ಉಳಿದಿರುವವರಿಗೆ ಕಾರ್ಡುಗಳನ್ನು ಎಷ್ಟು ಕಾಲಮಿತಿಯೊಳಗಾಗಿ ವಿತರಿಸಲಾಗುವುದು ;

ಈ) ಕುಟುಂಬಗಳ ಸರ್ವೆಯಲ್ಲಿ ಭಾರಿ ಅವ್ಯವಹಾರ ಮತ್ತು ಪಕ್ಷಪಾತದಿಂದ ಬಡ ಕುಟುಂಬಗಳು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಖಾಸಗಿ ಏಜೆನ್ಸಿಗೆ ಸರ್ವೆ ಕಾರ್ಯವನ್ನು ಒಪ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೇ ;

ಊ) ಕುಟುಂಬದಲ್ಲಿರುವ ಜನರ ಸಂಖ್ಯೆಗನುಗುಣವಾಗಿ ಪಡಿತರ ಚೀಟಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ ?